**ಭಾರತೀಯ ಸಂಸತ್‌ನ ಮೇಲೆ ಭಯೋತ್ಪಾದನಾ ಧಾಳಿ ಪ್ರಕರಣದಲ್ಲಿ ಅಪರಾಧಿಯಾಗಿದ್ದ ಅಫಜಲ್ ಗುರುಗೆ ನೇಣು ಹಾಕಿದ ಕುರಿತು ಲೇಖನ**

**–ಅರುಣ್ ಜೇಟ್ಲಿ**

13ನೇ ಡಿಸೆಂಬರ್ 2001ರಂದು ಭಾರತೀಯ ಸಂಸತ್‌ನ ಮೇಲೆ ಭಯೋತ್ಪಾದಕರ ಧಾಳಿ ನಡೆಯಿತು. ಸಂಸತ್ ಹಾಗೂ ಅದರ ಒಳಗಿದ್ದ ಜನರ ರಕ್ಷಣೆಯಲ್ಲಿ ನಿರತ ಹಲವಾರು ಭದ್ರತಾ ಪಡೆ ಸಿಬ್ಬಂದಿಗಳು ಹಾಗೂ ಪೋಲಿಸ್ ತಂಡದ ಸದಸ್ಯರು ತಮ್ಮ ಪ್ರಾಣ ಬಲಿದಾನ ಮಾಡಿದರು. ಧಾಳಿಯ ವಿರುದ್ಧ ಒಕ್ಕೊರಳಿನ ಧ್ವನಿಯೆತ್ತಿದ ಭಾರತ ತನ್ನ ಕಳವಳ ವ್ಯಕ್ತಪಡಿಸಿತು. ಭಾರತ ಒಂದು ಬಲಹೀನ ರಾಷ್ಟ್ರವೆಂಬ ಅಭಿಪ್ರಾಯ ಮೂಡದಂತೆ ನಾವೆಲ್ಲರು ನಮ್ಮ ದೃಢ ನಿಶ್ಚಯವನ್ನು ವ್ಯಕ್ತಪಡಿಸಿದೆವು ಹಾಗೂ ತಪ್ಪಿತಸ್ಥರ ವಿರುದ್ಧ ಕಠಿಣ ಕ್ರಮ ತೆಗೆದುಕೊಳ್ಳುವ ಪಣತೊಟ್ಟೆವು. ನಮ್ಮ ಧೀರ ಭದ್ರತಾ ಪಡೆ ಸಿಬ್ಬಂದಿಗಳು ಆಕ್ರಮಣಕಾರರನ್ನು ಸ್ಥಳದಲ್ಲಿಯೇ ಮುಗಿಸಿದರು. ಅನ್ಯ ಪಿತೂರಿಕೋರರ ವಿರುದ್ಧ ತನಿಖೆ ಹಾಗೂ ಕಾನೂನು ಕ್ರಮ ಜರುಗಿತು ಮತ್ತು ಕೆಲವರಿಗೆ ಶಿಕ್ಷೆಯೂ ವಿಧಿಸಲಾಯಿತು. ಭದ್ರತಾ ಪಡೆಯ ಸಮಯೋಚಿತ ಕಾರ್ಯಚರಣೆಯಿಂದ ಯಾವುದೇ ಭಯೋತ್ಪಾದಕ, ಸಂಸತ್ ಕಟ್ಟಡ ಪ್ರವೇಶಿಸಲು ಸಫಲನಾಗಲಿಲ್ಲ. ಭಾರತೀಯ ರಾಜಕೀಯ ನಾಯಕರಲ್ಲಿ ಹಲವರ ಜೀವ ತೆಗೆಯುವ ಹುನ್ನಾರ ಫಲಿಸಲಿಲ್ಲ.

ಅಸಂಖ್ಯ ಭಯೊತ್ಪಾದನಾ ಕೃತ್ಯಗಳಿಗೆ ನಾವು ಸಾಕ್ಷಿಯಾಗಿದ್ದೇವೆ. ಇಂತಹುಗಳಲ್ಲಿ ಹಲವು ಪಿತುರಿಗಳು ಗಡಿಯಾಚೆ ರೂಪುಗೊಂಡು, ಭಾರತದಲ್ಲಿ ವಿಧ್ವಂಸಕ ಸ್ವರೂಪ ಪಡೆದುಕೊಳ್ಳುತ್ತವೆ. ಇಂತಹ ಕೃತ್ಯಗಳು ನಡೆಯುವ ಸ್ಥಳವನ್ನು ಅತಿ ಜಾಗ್ರುತೆಯಿಂದ ಆಯ್ಕೆ ಮಾಡಿಕೊಳ್ಳಲಾಗುತ್ತದೆ. ಭಾರತದ ಸಂಸತ್, ಜಮ್ಮು ಹಾಗೂ ಕಾಶ್ಮೀರದ ವಿಧಾನಸಭೆ, ಅಕ್ಷರ್‌ಧಾಮ್ ದೇಗುಲ, ಮುಂಬೈ ನಗರ ಅವುಗಳಲ್ಲಿ ಕೆಲವಾಗಿವೆ. ಧಾಳಿಯ ಈ ಕೇಂದ್ರಗಳು, ಭಾರತೀಯ ಪ್ರಜಾಪ್ರಭುತ್ವ, ಸಾರ್ವಭೌಮತೆ, ಸಾಂಸ್ಕೃತಿಕ ಪರಂಪರೆ ಹಾಗೂ ಅರ್ಥವ್ಯವಸ್ಥೆಯ ಸಂಕೇತಗಳಾಗಿವೆ. ಭಾರತೀಯ ಸಂಸತ್ ಮೇಲೆ ನಡೆದ ಧಾಳಿ, ಭಾರತದ ವಿರುದ್ಧ ನಡೆದ ಧಾಳಿ ಎಂದೇ ಪರಿಗಣಿಸಬೇಕಾಗುತ್ತದೆ. ಆದಕಾರಣ, ಭಾರತ, ಆಕ್ರಮಣವನ್ನು ಒಂದೇ ಧ್ವನಿಯಲ್ಲಿ ಖಂಡಿಸಿದ್ದು ಸರಿಯಾಗಿದೆ.

ಕಾನೂನು ನಿಯಮಗಳ ಚೌಕಟ್ಟಿನಲ್ಲಿ ವರ್ತಿಸುವ ಸಮಾಜ ಭಾರತ. ಪೋಲಿಸ್ ತನಿಖೆಗಳನ್ನು ಕೂಲಂಕುಶವಾಗಿ ಪರಿಶೀಲಿಸುವಂತಹ ನ್ಯಾಯಾಲಯಗಳು ನಮ್ಮಲ್ಲಿವೆ. ದೀರ್ಘ ಪರಿಶೀಲನೆಯ ನಂತರ, ಉಚ್ಚ ನ್ಯಾಯಾಲಯ ಮತ್ತು ಅದರ ನಂತರ ಅಂತಿಮವಾಗಿ ಸರ್ವೋಚ್ಚ ನ್ಯಾಯಾಲಯದಲ್ಲಿ ಮೊಕದ್ದಮೆಯ ಸತ್ಯಾಸತ್ಯತೆಗಳ ದೀರ್ಘ ಚರ್ಚೆ, ಮನವಿ ಆಲಿಸಿದ ನಂತರವೇ, ನಮ್ಮ ನ್ಯಾಯಿಕ ವ್ಯವಸ್ಥೆ ಸಾಕ್ಷಾಧಾರಗಳನ್ನು ಕುಲಂಕುಶವಾಗಿ ವಿಚಾರಿಸಿ ಅರ್ಥೈಸಿಕೊಂಡ ನಂತರವೇ ತೀರ್ಪು ನೀಡಲಾಯಿತು. ಅಫ್ಸಲ್ ಗುರು ಪ್ರಕರಣದಲ್ಲಿ ಎಲ್ಲಾ ನ್ಯಾಯಿಕ ಪ್ರಾಧಿಕಾರಗಳು ಅವರನ್ನು ತಪ್ಪಿತಸ್ಥನೆಂದು ಹಾಗೂ ಮರಣದಂಡನೆಗೆ ಯೋಗ್ಯವಾದವನೆಂದು ಅಭಿಪ್ರಾಯ ತಿಳಿಸಿತ್ತು. ಆತನ ಕ್ಷಮಾದಾನ ಮನವಿಯನ್ನು

ರಾಷ್ಟ್ರಪತಿಗಳು ತಿರಸ್ಕರಿಸಿದ್ದರು. ಶಿಕ್ಷಾ ವಿಧಿ ಪೂರೈಸಲು ತೋರಿದ ವಿಳಂಬಕ್ಕೆ ಕಾರಣವೇನು ಎಂದು ಸಮಂಜಸವಾದ ವಿವರಣೆ ನೀಡಲು ಸರ್ಕಾರಕ್ಕೆ ಸಾಧ್ಯವಾಗಿಲ್ಲ. ಆದರೆ ಕಾನೂನು ಕೊನೆಗೂ ತನ್ನ ಕಾರ್ಯ ಪೂರ್ಣಗೊಳಿಸಿದೆ. ಸಾರ್ವಜನಿಕ ಅಭಿಪ್ರಾಯದ ಒತ್ತಡಕ್ಕೆ ಮಣಿದ ಸರ್ಕಾರ, ಬೇರೆ ದಾರಿ ಕಾಣದೆ ಕಾನೂನು ಕ್ರಮ ಅನುಸರಿಸಿದೆ. 13 ಡಿಸೆಂಬರ್ 2001ರಂದು ಅನುಸರಿಸಿದಂತೆ, ಇಂದೂ ಸಹ ಭಾರತ ಒಕ್ಕರಳಿನ ಧ್ವನಿಯಲ್ಲಿ ಮಾತನಾಡುತ್ತಾ, ಭಾರತ ರಾಷ್ಟ್ರವು ದುರ್ಬಲ ರಾಷ್ಟ್ರವಲ್ಲ, ಅದರ ವಿರುದ್ಧ ಹಾಗೂ ಅದರ ಸಾರ್ವಭೌಮತೆ ಮತ್ತು ಅದರ ಸಂಸ್ಥೆಗಳ ವಿರುದ್ಧ ಆಕ್ರಮಣ ನಡೆಸುವ ವಿಧ್ವಂಸಕ ಶಕ್ತಿಗಳ ವಿರುದ್ಧ ಸೂಕ್ತ ಕ್ರಮತೆಗೆದುಕೊಳ್ಳುತ್ತದೆ ಎಂಬ ಸಂದೇಶವನ್ನು ವಿಶ್ವಕ್ಕೆ ರವಾನಿಸುವ ಆವಶ್ಯಕತೆಯಿದೆ. ವಿಳಂಬವಾದರು, ಇಂದು ನ್ಯಾಯ ಸಂದಿದೆ.